# ನಿಮ್ಮೊಡನೆ

## ಪೊಲೀಸ್ ಪಡೆಯಲ್ಲಿ ಲಿಂಗ ತಾರತಮ್ಯ

ಪೊಲೀಸ್ ನೇಮಕಾತಿಯ ಸಂದರ್ಭದಲ್ಲಿ ಅಭ್ಯರ್ಥಿಯ ಲಿಂಗ ಸಂವೇದನಾಶೀಲತೆಯನ್ನು ಪರೀಕ್ಷಿಸುವುದು; ಉದ್ಯೋಗಕ್ಕೆ ಸೇರಿದ ಬಳಿಕ ಭಡ್ತಿ ಮತ್ತು ಪುರಸ್ಕಾರಗಳನ್ನು ಪ್ರಕಟಿಸುವಾಗ ಮಹಿಳೆಯರ ಕುರಿತು ಆತನ ಧೋರಣೆಗಳನ್ನು ಪರಿಶೀಲಿಸುವುದು ಸ್ವಾಗತಾರ್ಹ ಕ್ರಮ.

ಲಿಂಗ ತಾರತಮ್ಯವಿಲ್ಲದ ಸಮಾಜ ನಿರ್ಮಾಣ ಹೆಣ್ಣು ಕಾಣುತ್ತಿರುವ ಬಹುದೊಡ್ಡ ಕನಸು. ಶಿಕ್ಷಣ, ಉದ್ಯೋಗ, ಆರೋಗ್ಯ ಮುಂತಾಗಿ ಎಲ್ಲ ಕ್ಷೇತ್ರಗಳಲ್ಲೂ ಗಂಡು ಮತ್ತು ಹೆಣ್ಣಿನ ನಡುವಣ ತಾರತಮ್ಯ ಇನ್ನೂ ಪೂರ್ತಿಯಾಗಿ ಇಲ್ಲವಾಗಿಲ್ಲ. ಎಲ್ಲವನ್ನೂ ತನ್ನ ಹಿಡಿತದಲ್ಲೇ ಇಟ್ಟುಕೊಳ್ಳಬೇಕೆಂಬ ಗಂಡಿನ ಅಹಂ, ಹೆಣ್ಣಿನ ಮೇಲಿನ ದೌರ್ಜನ್ಯಗಳ ಹೆಚ್ಚಳಕ್ಕೆ ಮುಖ್ಯ ಕಾರಣ. ದೈಹಿಕವಾಗಿ ಬಲಿಷ್ಠವಾಗಿರುವುದು ಗಂಡಿನ ಹೆಚ್ಚುಗಾರಿಕೆ ಎಂದು ಭಾವಿಸುವುದು ಮೂರ್ಖತನ. ಗಂಡು– ಹೆಣ್ಣಿನ ವ್ಯಕ್ತಿತ್ವವನ್ನು ತೂಗಿ ನೋಡಿದರೆ, ಹೆಚ್ಚು ದೈಹಿಕ ಶ್ರಮ ಪಡುತ್ತಿರುವ ಹಾಗೂ ಮಾನಸಿಕ ಒತ್ತಡಗಳನ್ನು ಚಾಕಚಕ್ಯತೆಯಿಂದ ನಿಭಾಯಿಸುತ್ತಿರುವ ಹೆಣ್ಣಿನ ವ್ಯಕ್ತಿತ್ವವೇ ಹೆಚ್ಚು ಬಲಿಷ್ಠವಾದದ್ದು.

ಹೆಣ್ಣಿನ ವಿರುದ್ಧ ದೌರ್ಜನ್ಯದ ಪ್ರಕರಣಗಳು ನಡೆಯದಂತೆ ತಡೆಯುವ ನೈತಿಕ ಹೊಣೆಗಾರಿಕೆ ಇಡೀ ಸಮಾಜದ್ದು. ದುರ್ಬಲರ ಮೇಲಿನ ದೌರ್ಜನ್ಯವನ್ನು ತಡೆದು, ರಕ್ಷಣೆ ಕೊಡಲೆಂದೇ ಪೊಲೀಸ್ ವ್ಯವಸ್ಥೆ ಇದೆ. ಆದರೆ ಪೊಲೀಸರೂ ಹೆಣ್ಣಿನ ವಿರುದ್ಧ ತಾರತಮ್ಯ ಧೋರಣೆಯನ್ನು ಅನುಸರಿಸಿದರೆ ಏನು ಮಾಡುವುದು? ನವದೆಹಲಿಯಲ್ಲಿ ಇತ್ತೀಚೆಗೆ ಸ್ಕೂಟರ್‌ನಲ್ಲಿ ಸಂಚಾರಿ ನಿಯಮವನ್ನು ಉಲ್ಲಂಘಿಸಿದ ಮಹಿಳೆಯ ಬಳಿ ದಂಡ ವಸೂಲಿ ಮಾಡಹೊರಟ ಪೊಲೀಸ್ ಅಧಿಕಾರಿಯೊಬ್ಬ, ದಂಡಕ್ಕೆ ರಸೀದಿ ಕೇಳಿದಾಗ ಇಟ್ಟಿಗೆಯಿಂದ ಹಲ್ಲೆ ನಡೆಸಿದ ಪ್ರಕರಣ ತೀರಾ ಇತ್ತೀಚಿನದ್ದು. ಹೆಣ್ಣಿನ ಮೇಲಿನ ದೌರ್ಜನ್ಯಗಳಿಗೆ ಪೊಲೀಸರು ಹೆಚ್ಚು ಸಂವೇದನಾಶೀಲರಾಗಿ ಸ್ಪಂದಿಸಬೇಕಾದ ಅಗತ್ಯವನ್ನು ಈ ಘಟನೆ ಎತ್ತಿ ತೋರಿಸಿದೆ. ಈ ಹಿನ್ನೆಲೆಯಲ್ಲೇ ಪೊಲೀಸ್ ಇಲಾಖೆಯಲ್ಲಿ ಲಿಂಗತಾರತಮ್ಯದ ಧೋರಣೆಯನ್ನು ನಿವಾರಿಸಲು ಹಲವು ಕ್ರಮಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈ ನಿಟ್ಟಿನಲ್ಲಿ ಪ್ರತಿ ರಾಜ್ಯವೂ ಲಿಂಗ ಸಂವೇದನೆಯ ಸೂಚ್ಯಂಕವನ್ನು ರೂಪಿಸಿ, ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸುವಾಗ ಅದನ್ನು ಜಾರಿಗೆ ತರಬೇಕೆಂದೂ ಕೇಂದ್ರ ಸರ್ಕಾರ ಸಲಹೆ ನೀಡಿದೆ.

ಪೊಲೀಸ್ ಉದ್ಯೋಗದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯೇ. ಹಲವಾರು ಸಮಿತಿಗಳು ಶಿಫಾರಸ್ಸುಗಳನ್ನು ಮಾಡಿದ್ದರೂ, ಮಹಿಳೆಯರಿಗೆ ಅರ್ಹ ಪ್ರಮಾಣದ ಮೀಸಲಾತಿ ಒದಗಿಸುವ ಕೆಲಸ ಪೊಲೀಸ್ ಇಲಾಖೆಯಲ್ಲಿ ಈವರೆಗೆ ಸಮರ್ಪಕವಾಗಿ ನಡೆದಿಲ್ಲ. ಕಾನ್‌ಸ್ಟೇಬಲ್‌ಗಳ ನೇಮಕಾತಿಯ ಸಂದರ್ಭದಲ್ಲಿ ಇಂತಹ ಕೆಲವು ಪ್ರಯತ್ನಗಳು ನಡೆದಿವೆಯಾದರೂ, ಉನ್ನತ ಹುದ್ದೆಗಳಲ್ಲಿ ಮಹಿಳೆಯರ ಸಂಖ್ಯೆ ಗಮನಾರ್ಹವಾಗಿ ಕಡಿಮೆ ಇದೆ. ಈ ಕೊರತೆಯನ್ನು ತುಂಬಿಕೊಳ್ಳುವತ್ತ ಶೀಘ್ರ ಗಮನ ಹರಿಸಬೇಕು. ಮಹಿಳಾ ಠಾಣೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಜತೆಗೇ ಈಗ ಇಲಾಖೆಯಲ್ಲಿರುವ ಪುರುಷ ಸಿಬ್ಬಂದಿಗೆ ಲಿಂಗ ಸಂವೇದನಾಶೀಲತೆಯನ್ನು ರೂಢಿಸಿಕೊಳ್ಳುವ ತರಬೇತಿ ಕಾರ್ಯಕ್ರಮಗಳನ್ನು ನಡೆಸಬೇಕು. ‘ಪೊಲೀಸ್ ಅಧಿಕಾರಿಗಳ ಸೇವಾ ದಾಖಲೆಯಲ್ಲಿ ಅವರ ಲಿಂಗ ಸಂವೇದನಾಶೀಲತೆಯ ಅಂಶವನ್ನೂ ಸೂಚಿಸಬೇಕು’ ಎನ್ನುವ ಕೇಂದ್ರ ಗೃಹ ಇಲಾಖೆಯ ಸೂಚನೆ ಸ್ವಾಗತಾರ್ಹವಾದದ್ದು. ನೇಮಕಾತಿಯ ಸಂದರ್ಭದಲ್ಲಿ ಅಭ್ಯರ್ಥಿಯ ಲಿಂಗ ಸಂವೇದನಾಶೀಲತೆಯನ್ನು ಪರೀಕ್ಷಿಸುವುದು; ಉದ್ಯೋಗಕ್ಕೆ ಸೇರಿದ ಬಳಿಕ ಭಡ್ತಿ ಮತ್ತು ಪುರಸ್ಕಾರಗಳನ್ನು ಪ್ರಕಟಿಸುವಾಗ ಮಹಿಳೆಯರ ಕುರಿತು ಆತನ ಧೋರಣೆಗಳನ್ನು ಪರಿಶೀಲಿಸುವುದು ಈ ನಿಟ್ಟಿನಲ್ಲಿ ಮಹತ್ವದ ಕ್ರಮ ಆಗಬಹುದು.

ಹೆಣ್ಣಿನ ವಿರುದ್ಧ ದೌರ್ಜನ್ಯ ಎಸಗಿದ ಅಥವಾ ದೌರ್ಜನ್ಯದ ದೂರು ದಾಖಲಿಸುವ ಸಂದರ್ಭದಲ್ಲಿ ತಾರತಮ್ಯ ತೋರಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಹೆಣ್ಣಿನ ವಿರುದ್ಧ ದೌರ್ಜನ್ಯದ ಬಹಳಷ್ಟು ಪ್ರಕರಣಗಳಲ್ಲಿ ಪೊಲೀಸ್ ಸಿಬ್ಬಂದಿ, ಭಾರತೀಯ ದಂಡಸಂಹಿತೆಯ ಸೂಕ್ತ ಸೆಕ್ಷನ್‌ಗಳ ಪ್ರಕಾರ ಮೊಕದ್ದಮೆಯನ್ನು ದಾಖಲಿಸುವುದಿಲ್ಲ. ಇದರಿಂದಾಗಿ ಆರೋಪಿಗಳು ಸುಲಭವಾಗಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಅದಂತೂ ಮಹಿಳೆಯರ ತೇಜೋವಧೆಗೆ ಕಾರಣವಾಗಿದೆ. ಅಂತರ್ಜಾಲದಲ್ಲಿ ಅಶ್ಲೀಲ ವೀಡಿಯೋಗಳ ಪ್ರಸಾರ ತಡೆಯುವ ನಿಟ್ಟಿನಲ್ಲಿ ಪೊಲೀಸರು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ವಿಶೇಷ ತರಬೇತಿ ಹೊಂದಿದ ಸೈಬರ್ ಕ್ರೈಮ್ ಘಟಕಗಳನ್ನು ಸ್ಥಾಪಿಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರವು ಸೂಚಿಸಿರುವುದು ಸ್ವಾಗತಾರ್ಹ. ಹೆಣ್ಣು ಕೇವಲ ಭೋಗವಸ್ತು ಎನ್ನುವ ಮನೋಭಾವ ಸಮಾಜದಿಂದ ತೊಲಗದೆ ಆಕೆಯ ಮೇಲಿನ ದೌರ್ಜನ್ಯ ಕಡಿಮೆ ಆಗದು. ಪೊಲೀಸ್ ಇಲಾಖೆ ಹೆಚ್ಚು ಲಿಂಗ ಸಂವೇದನಾಶೀಲತೆಯನ್ನು ಸಾಧಿಸಿದಷ್ಟೂ ಹೆಣ್ಣಿನ ವಿರುದ್ಧದ ಅಪರಾಧಗಳನ್ನು ತಡೆಯುವುದು ಸುಲಭವಾಗುತ್ತದೆ.

■ ಬಿ.ಎಂ.ಹನೀಫ್



ಈಶ್ವರ್